ಮೂಲ ದಾವಾ ಸಂಖ್ಯೆ 3/2019

ಡಿ ಡಬ್ಲ್ಯೂ-5

**(ದಿನಾಂಕ 10.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ವಾದಿ ಪರ ಶ್ರೀ ಕೆ ಬಿ ಆರ್ ವಕೀಲರಿಂದಃ-**

ಸಾಕ್ಷಿ ನುಡಿಯಲು ನ್ಯಾಯಾಲಯ ದಿಂದ ನೋಟೀಸು ಬಂದಿರುವುದಿಲ್ಲ. 1ನೇ ಪ್ರತಿವಾದಿ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ವಾದಿ ದಾವಾ ಏಕೆ ಹೂಡಿರುತ್ತಾರೆ ಏನು ಪರಿಹಾರ ಕೇಳಿದ್ದಾರೆ ನನಗೆ ಗೊತ್ತಿಲ್ಲಾ. ವೀರಯ್ಯ ಕೂಡ ವಿಲ್ ಬರೆದಿದ್ದಾರೆ ಅಂತಾ ತಕರಾರು ಇದೆ ಎಂದರೆ ನನಗೆ ಗೊತ್ತಿಲ್ಲಾ. ವೀರಯ್ಯ ಮತ್ತು ಕೊಟ್ರಯ್ಯ ಯಾವ ದಾಖಲೆ ಆಧರಿಸಿ ಪ್ರಕರಣ ಹೂಡಿರುತ್ತಾರೆ ನನಗೆ ಗೊತ್ತಿಲ್ಲಾ. ಗುರುಬಸ್ಸಪ್ಪ ವಿಲ್ ಬರೆಸಿಕೊಂಡಿರುತ್ತಾರೆ. ಆದರೆ ಪೂರ್ಣ ಮಾಹಿತಿ ಗೊತ್ತಿಲ್ಲಾ. ವೀರಯ್ಯ ಮತ್ತು ಕೊಟ್ರಯ್ಯನಿಗೆ ಯಾವುದಾದರು ವಿಲ್ ಬರೆದುಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲಾ. ವಿಲ್ ಬರೆದು 14 ವರ್ಷ ಆಗಿರುತ್ತದೆ. ವಿಲ್ ನಲ್ಲಿ ಯಾವ ಆಸ್ತಿ ಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲಾ. ದಾವಾದಲ್ಲಿ 42 ಎಕರೆ ಗದ್ದೆ ಇದೆ. ಪಾಲು ವಿಭಾಗ ಕೇಳಿ ಸೌಭಾಗ್ಯಮ್ಮ ಕೇಳಿ ಹಾಕಿರುತ್ತಾರೆ. ಆಸ್ತಿ ಸೌಭಾಗ್ಯಮ್ಮನ ಆಸ್ತಿ. ಸೌಭಾಗ್ಯಮ್ಮ ವೀರಯ್ಯ ಕೊಟ್ರಯ್ಯ ರವರ ಹೆಸರಿಗೆ ವಿಲ್ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಯಾವುದೇ ವಿಲ್ ದಾಖಲೆ ನೋಡಿರುವುದಿಲ್ಲಾ. ಸಹಿ ಮಾತ್ರ ಮಾಡಿರುತ್ತೇನೆ. ವಿಲ್ ಬರೆದ ಆಸ್ತಿಗಳು ಗುರುಬಸ್ಸಪ್ಪನ ಹೆಸರಿಗೆ ಇತ್ತು. ಗುರುಬಸ್ಸಯ್ಯನಿಗಿಂತ ಮೊದಲೇ ಸೌಭಾಗ್ಯಮ್ಮ ವಿಲ್ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಆಸ್ತಿಗಳಿಗೆ ಮಾಲೀಕರು ಸೌಭಾಗ್ಯಮ್ಮ ಎಂದರೆ ಸರಿ. ವೀರಯ್ಯ ಕೊಟ್ರಯ್ಯ ಮತ್ತು ಗುರುಬಸಯ್ಯನ ನಡುವೆ ಇರುವ ಬೇರೆ ಕೇಸ್ ಗಳ ಬಗ್ಗೆ ಮಾಹಿತಿ ನನಗೆ ಇಲ್ಲಾ. ವಿಲ್ ನಲ್ಲಿ ಬರೆದಿರುವ ಆಸ್ತಿಯ ಸರ್ವೆ ನಂಬರ ವಿಸ್ತೀರ್ಣ ಚೆಕ್ ಬಂದಿ ಹೇಳಲು ಬರುವುದಿಲ್ಲಾ. ದೇವಿರಮ್ಮ ಚನ್ನವೀರಮ್ಮ ಸೌಭಾಗ್ಯಮ್ಮ

ಮೊದಲು ದಾವಾ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಗುರುಬಸ್ಸಯ್ಯನವರು ಖರೀದಿಸಿರುತ್ತಾರೆ. ದೇವಿರಮ್ಮ, ಚನ್ನವೀರಮ್ಮ, ಸೌಭಾಗ್ಯಮ್ಮ ದಾವಾ ಆಸ್ತಿಗಳನ್ನು ಖರೀದಿಸಿದ್ದರು ನಂತರ ಗುರುಬಸ್ಸಯ್ಯನವರು ಅಧಿಕಾರ ಇಲ್ಲದೇ ವಿಲ್ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲಾ. ಗುರುಬಸ್ಸಯ್ಯ ಖರೀದಿ ಮಾಡುವಾಗ ನಾನು ಹಾಜರಿರಲಿಲ್ಲ. ಗುರುಬಸ್ಸಯ್ಯ ಆಸ್ತಿ ಖರೀದಿಸಿದ ವಿಚಾರ ಕಾಳಮ್ಮ ತಿಳಿಸಿರುತ್ತಾರೆ. ಸದರಿ ವಿಚಾರ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿಲ್ಲಾ ಎಂದರೆ ಬರೆದಿಲ್ಲಾ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ಗುರುಬಸ್ಸಯ್ಯನವರು ಹೇಳಿ ಬರೆಸಿರುತ್ತಾರೆ. ಸೌಭಾಗ್ಯಮ್ಮನಿಗೆ ಮಕ್ಕಳು ಇಲ್ಲದ ಕಾರಣ ವಾದಿಗಳನ್ನು ಸ್ವಂತ ಮಕ್ಕಳಂತೆ ಸಾಕಿ ಬೆಳೆಸಿರುತ್ತಾರೆ ಎಂದರೆ ಗೊತ್ತಿಲ್ಲಾ. ಸಬ್ ರಜಿಸ್ಟ್ರರ ಕಚೇರಿಗೆ ನಾನು ಗುರುಬಸ್ಸಯ್ಯ ಮತ್ತು ರೇವಣಸಿದ್ದಯ್ಯ ಬಂದಿರುತ್ತೇವೆ. ಗುರುಬಸ್ಸಯ್ಯ ವಿಲ್ ಬರೆಯಲು ವಾಹಿತಿ ಕೊಟ್ಟಿರುತ್ತಾರೆ. ಸಬ್ ರಜಿಸ್ಟ್ರರ ಕಚೇರಿಯಲ್ಲಿ ಅಧಿಕಾರಿಯ ಸಮಕ್ಷಮ ನಾನು ಸಹಿ ವಾಡಿರುತ್ತೇನೆ. ವಿಲ್ ನ್ನು ನನಗೆ ಸಬ್ ರಜಿಸ್ಟ್ರರ ಓದಿ ಹೇಳಿರುವುದಿಲ್ಲಾ. ಅದನ್ನು ನಾನು ಓದಿ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲಾ. ಸೌಭಾಗ್ಯಮ್ಮ ಬರೆದುಕೊಟ್ಟ ವಿಲ್ ಆಧರಿಸಿ ವಾದಿಗಳು ದಾವಾ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಗುರುಬಸ್ಸಯ್ಯ ಸದರಿ ದಾವೆಯಲ್ಲಿ ಹಾಜರಾಗಿ ತಕರಾರು ಸಲ್ಲಿಸಿದ್ದು ವಿಲ್ ಬಗ್ಗೆ ಅವರು ಹೇಳಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲಾ. ಗುರುಬಸ್ಸಯ್ಯ ಮತ್ತು ಸೌಭಾಗ್ಯಮ್ಮ 1ನೇ ಪ್ರತಿವಾದಿಯನ್ನು ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಗರುಬಸ್ಸಯ್ಯನಿಗೆ 80 ವರ್ಷ ವಯಸ್ಸು ಇತ್ತು ಎಂದರೆ ಗೊತ್ತಿಲ್ಲಾ. ಆರೋಗ್ಯ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಬುದ್ದಿ ಸ್ಥಿಮಿತದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್ ಆದ ತಿಂಗಳು ದಿನಾಂಕ ಹೇಳಲು

ಬರುವುದಿಲ್ಲಾ. ಸದರಿ ದಿನ ಅಜ್ಜಯ್ಯ ಕೂಡ ಸಬ್ ರಜಿಸ್ಟ್ರರ ಕಚೇರಿಗೆ ಬಂದಿದ್ದರು ಎಂದರೆ ಸರಿಯಲ್ಲ. ಗುರುಬಸ್ಸಯ್ಯನಿಗೆ ಯಾವುದೇ ವಾಹಿತಿ ನೀಡದೇ ನಾನು ಗುರುಬಸ್ಸಯ್ಯ ಸೇರಿ ವಿಲ್ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಬ್ ರಜಿಸ್ಟ್ರರ ಗುರುಬಸ್ಸಯ್ಯನವರಿಗೆ ನನ್ನ ಸಮಕ್ಷಮ ಓದಿ ತಿಳಿಸಿರುವುದಿಲ್ಲಾ. ಗುರುಬಸ್ಸಯ್ಯನನ್ನು ಸದರಿ ದಾಖಲೆ ಸತ್ಯಾಸತ್ಯತೆ ಕೇಳಿಲ್ಲಾ ಎಂದರೆ ಮೊದಲೇ ಓದಿ ಹೇಳಿರುತ್ತಾರೆ. ಸಬ್ ರಜಿಸ್ಟ್ರರ್ ಏನು ಕೇಳಲಿಲ್ಲ ಷರಾ ಬರೆಯಲಿಲ್ಲಾ ಎಂದರೆ ಗೊತ್ತಿಲ್ಲಾ, ಅಜ್ಜಯ್ಯನಿಗೆ ಸಹಾಯ ಮಾಡಲು ನಾವು ಗುರುಬಸ್ಸಯ್ಯನಿಗೆ ವಾಹಿತಿ ನೀಡದೇ ವಿಲ್ ಸೃಷ್ಟಿ ಮಾಡಲು ಸಹಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗಳ ಕುಟುಂಬದ ಬಗ್ಗೆ ಯಾವುದೇ ವಾಹಿತಿ ಇಲ್ಲಾದಿದ್ದರೂ ಸಹ ಅಜ್ಜಯ್ಯನ ಮಾತಿನ ಮೇರೆಗೆ ಸಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.